ಶ್ರೀ ಕೆ. ಹೆಚ್. ಹನುಮೇಗೌಡ.— ಪ್ರತಿಯೊಬ್ಬ ವಿದ್ಯಾರ್ಥಿಯೂ ಪ್ರತಿ ತಿಂಗಳು 125 ರೂಪಾಯಿ ಖರ್ಚು ಮಾಡುವುದಕ್ಕೆ ಅವಕಾಶ ಇದ್ದು, 6–7 ತಿಂಗಳುಗಳ ಕಾಲ ವಿದ್ಯಾರ್ಥಿಗಳು ಹೆಚ್ಚು ಖರ್ಚು ಮಾಡಲಿಕ್ಕೆ ವಾರ್ಡನ್ ಅವಕಾಶ ಕೊಟ್ಟಿದ್ದು, ಪರೀಕ್ಷೆ ಸಮಯ ಎನ್ನುವ ಅಂಶ ತಿಳಿದಿದ್ದರೂ ಕೂಡ ಸರ್ಕಾರದ ಗಮನಕ್ಕೆ ತರದೆ ಸ್ವೀಚ್ಡ್ ಯಿಂದ ಹಾಸ್ಟಲ್ ಕ್ಲೋಸ್ ಮಾಡುತ್ತೇವೆ ಎಂದು ಮೆಮೋ ಕೊಟ್ಟಿರತಕ್ಕದ್ದು ಕರ್ತವ್ಯ ಚ್ಯುತಿಯಲ್ಲವೇ ? ಈ ರೀತಿ ಕರ್ತವ್ಯ ಚ್ಯುತಿ ಮಾಡಿದವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತಿರಾ ?

ಶ್ರೀ ಎಲ್. ಜಿ. ಹಾವನೂರ್ — ವಿದ್ಯಾರ್ಥಿಗಳು ಪ್ರತಿ ತಿಂಗಳು 15 ರೂಪಾಯಿ ಹೆಚ್ಚು ಖರ್ಚು ಮಾಡಿದ್ದರಿಂದ, ಬಹುಶಃ ವಿದ್ಯಾರ್ಥಿಗಳಿಂದ ಆ 15 ರೂಪಾಯಿ ವಸೂಲು ಆಗಬಹುದೆಂದು ತಿಳಿದುಕೊಂಡು ಆ ರೀತಿ ಮೆಮೋ ಕೊಟ್ಟಿದ್ದಾರೆ ಅದು ತಪ್ಪಲ್ಲ.

(*iii*) *re : hardship to 250 KEB employees whose service are to be terminated.*

SRI S. M. SHEERNALI CHANDRASHEKAR.— Sir, I call the attention of the Chief Minister to the hardship caused to the 250 employees of Karnataka Electricity Board whose services are to be terminated.

SRI D. DEVARAJ URS (Chief Minister).— I wish to make the following Statement.

My attention has been called to the matter that about 250 employees of the Karnataka Electricity Board are about to be relieved by 25th March, causing great hardship on the part of the poor employees; and I make the following statement in this behalf :–

There is no proposal now to retrench about 250 labourers by 25th March 1978. However it is a common practice in the Karnataka Electricity Board to retrench temporary labourers especially in the major construction wing of the Board as and when the works for which they are Employed are completed. In the O&M wing of the Board, such large scale retrenchment is not being effected. The retrenched employees will however be paid compensation as per the provisions made in the Industrial Dispute Act, whenever they are retrenched for want of work.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.— ಸ್ವಾಮಿ, ತಾವು ಸಾಮಾನ್ಯ ಆಡಳಿತ ಮಂತ್ರಿಗಳು ಹೌದು. ಕಳೆದ ಶಾಸನ ಸಭೆಯಲ್ಲಿ ಫಾರೆಸ್ಟ್ ಡಿಪಾರ್ಟ್‌ಮೆಂಟ್ ಬಗ್ಗೆ ಒಂದು ಗಮನ ಸೆಳೆಯುವ ಸೂಚನೆಯನ್ನು ನಾನು ತಂದಿದ್ದೆ, ಅದೇನೆಂದರೆ ಸರ್ಕಾರಿ ನೌಕರಿಯಲ್ಲಿ ಕೆಲವು ವರ್ಷಗಳವರೆಗೆ ಕೆಲಸ ಮಾಡಿದವರನ್ನು ತಾವು ಕೆಲಸದಿಂದ ರಿಟ್ರೆಂಚ್ ಮಾಡುತ್ತೀರಿ. ಅಷ್ಟು ಹೊತ್ತಿಗೆ ಅವರಿಗೆ ವಯೋ ಮಿತಿ ಮೀರಿ ಹೋಗಿರುತ್ತದೆ, ಅವರಿಗೆ ಬೇರೆ ಕಡೆ ಕೆಲಸಕ್ಕೆ ಸೇರಿಕೊಳ್ಳುವುದಕ್ಕೆ ಆಗುವುದಿಲ್ಲ. ಅಲ್ಲದೆ ಅಷ್ಟು ಹೊತ್ತಿಗೆ ಅವರು ಮದುವೆ ಮಾಡಿಕೊಂಡಿರುತ್ತಾರೆ. ಅಂಥವರನ್ನು ನೀವು ಕೆಲಸದಿಂದ ತೆಗೆದರೆ ಅವರಿಗೆ ತ್ರಿಶಂಕು ಸ್ವರ್ಗವಾಗುತ್ತದೆ. ಆದ್ದರಿಂದ ಇಂಥವರಿಗೋಸ್ಕರ ಏನಾದರೊಂದು ಪರಿಹಾರವನ್ನು ಕಂಡು ಹಿಡಿಯುವುದು ಒಳ್ಳೆಯದಲ್ಲವೆ ?

SRI D. DEVARAJ URS (Chief Minister).— Sir, it is a vague question, I do not know under what category they come. There are thousands of employees in different category. If the hon. Member specifies in what category such a dfficulty has arisen, then only I can answer otherwise it is difficult.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.— ತಾವು ತಮ್ಮ ಹೇಳಿಕೆಯಲ್ಲೇ ಹೇಳಿದ್ದೀರಿ ಆದೇನೆಂದರೆ, ನಾವು ಸದ್ಯದಲ್ಲೇ ಯಾವ ಕ್ರಮವನ್ನೂ ತೆಗೆದುಕೊಳ್ಳುವುದಿಲ್ಲ, ಒಂದು ವೇಳೆ ತೆಗೆದು ಕೊಂಡರೂ ಕೂಡ ಆ ಸಂದರ್ಭದಲ್ಲಿ ಅವರಿಗೆ ಸೂಕ್ತ ಪರಿಹಾರವನ್ನು ಕೊಡುತ್ತೇವೆಂದು. ಇಲ್ಲಿ ಪರಿಹಾರದ ಪ್ರಶ್ನೆ ಬರುವುದಿಲ್ಲ. ಅವರಿಗೆ ೫೦—೫೫ ವರ್ಷ ಆದಮೇಲೆ ಅವರನ್ನು ಕೆಲಸದಿಂದ ತೆಗೆದು ಹಾಕಿದರೆ ಅವರಿಗೆ ಮುಂದೆ ಜೀವನಕ್ಕೆ ತೊಂದರೆಯಾಗುವುದಿಲ್ಲವೆ ? ಆದ್ದರಿಂದ ಈ ಟೆಂಪೊರರಿ ಅಪಾಯಿಂಟ್ ಮೆಂಟ್ ಎಂದು ಏನು ಕೆಲಸಕ್ಕೆ ತೆಗೆದುಕೊಳ್ಳುತ್ತೀರಿ, ಇದನ್ನೇ ನಿಲ್ಲಿಸುವುದಕ್ಕಾಗುವು ದಿಲ್ಲವೆ ?

ಶ್ರೀ ಡಿ. ದೇವರಾಜ ಅರಸ್.— ಟೆಂಪೊರರಿ ಅಪಾಯಿಂಟ್‌ಮೆಂಟ್ ಎಂಬುದನ್ನೇ ತೆಗೆದುಹಾಕು ವುದಕ್ಕಾಗವುದಿಲ್ಲ. ಉದಾಹರಣೆಗೆ ಹೇಳಬೇಕೆಂದರೆ ಎಲ್ಲಾದರೂ ಕಂಭಗಳನ್ನು ನಿಲ್ಲಿಸಬೇಕಾಗಿರುತ್ತದೆ, ತಂತಿ ಹಾಕಾಬೇಕಾಗಿರುತ್ತದೆ ಇಂಥ ಟೆಂಪೊರರಿ ಕೆಲಸಗಳು ಇರುವುದರಿಂದ ಆ ಸಂದರ್ಭಕ್ಕೆ ಮತ್ತು ಆ ಸಮಯಕ್ಕೆ ಸಾಕಾಗುವಷ್ಟು ಜನರನ್ನು ಟೆಂಪೊರರಿಯಾಗಿ ತೆಗೆದುಕೊಳ್ಳಲೇ ಬೇಕಾಗುತ್ತದೆ. ಅವರನ್ನು ತೆಗೆದುಕೊಳ್ಳುವಾಗಲೂ ಕೂಡ ಇಂಡಸ್ಟ್ರಿಯಲ್ ಆಕ್ಟ್ ಕಾಂಟ್ರಾಕ್ಟ್ ಲೇಬರ್ ಆಕ್ಟ್ ಇವುಗಳ ನಿಯಮ ಗಳಿಗನುಸಾರವಾಗಿ ಯಾವರೀತಿ ತೆಗೆದುಕೊಳ್ಳಬೇಕು ಮತ್ತು ಅವರಿಗೆ ಎಷ್ಟು ಸಂಬಳ ಕೊಡಬೇಕೆಂಬು ದನ್ನೂ ನೋಡಿಕೊಂಡು ತೆಗೆದುಕೊಳ್ಳುತ್ತೇವೆ. ಆದರೆ ತಾವು ಹೇಳುವಂತೆ ಒಂದು ಸಾರಿ ಕೆಲಸಕ್ಕೆ ತೆಗೆದುಕೊಂಡವರನ್ನು ಪುನಃ ಯಾವುದೇ ಕಾರಣದಿಂದಲೂ ಕೆಲಸದಿಂದ ತೆಗೆಯಬಾರದೆಂದು ಹೇಳುವು ದಾದರೆ ನಮಗೆ ಕಷ್ಟವಾಗುತ್ತದೆ.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್. — ನಾನು ಕ್ಯಾಷುಯಲ್ ಲೇಬರರ್ಸ್ ಬಗ್ಗೆ ತಮ್ಮನ್ನು ಪ್ರಶ್ನೆ ಕೇಳುತ್ತಿಲ್ಲ. ಖಾಯಂ ಆಗಿ ಎಂದು ಕೆಲಸಕ್ಕೆ ತೆಗೆದುಕೊಂಡವರನ್ನು ಸ್ವಲ್ಪ ಕಾಲಾ ನಂತರ ತೆಗೆದರೆ ಅವರಿಗೆ ತೊಂದರೆಯಾಗುವುದಿಲ್ಲವೆ ?

ಶ್ರೀ ಡಿ. ದೇವರಾಜ ಅರಸ್,— ಇಲ್ಲಿ ಬಂದಿರುವ ಪ್ರಶ್ನೆ ಈ ಎಲೆಕ್ಟ್ರಿಸಿಟಿ ಬೋರ್ಡ್‌ನಲ್ಲಿ ಈಗ ೨೫೦ ಜನ ಕೆಲಸಗಾರರನ್ನು ತೆಗೆಯುತ್ತಿದ್ದಾರೆ ಎಂದು.

MATTER UNDER RULE 312

re. Non release of building grants for the Colleges

ಶ್ರೀ ಟಿ. ಆರ್. ಶಾಮಣ್ಣ.— ಮಾನ್ಯ ಸಭಾಪತಿಗಳೇ, ಈ ಶಾಲಾ ಕಾಲೇಜುಗಳಿಗೆ ಸಂಬಂಧ ಪಟ್ಟಂತೆ ಸರ್ಕಾರದವರು ಹಣವನ್ನೊದಗಿಸಿಕೊಟ್ಟಿದರೂ ಕೂಡ ನಾನಾ ಕಾರಣಗಳಿಂದ ಈ ಗ್ರಾಂಟ್‌ನ್ನು ಸಕಾಲದಲ್ಲಿ ರಿಲೀಸ್ ಮಾಡದೇ ಇರುವುದರಿಂದ ಉಂಟಾಗಿರುವ ತೊಂದರೆ ಏನು ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಇದರಿಂದಾಗಿ ಈ ಶಾಲಾ ಕಾಲೇಜುಗಳು ಮುಂಬರುವ ವರ್ಷಗಳಲ್ಲಿ ತಮ್ಮ ಕೆಲಸಕಾರ್ಯಗಳನ್ನು ಮಾಡಲು ತೊಂದರೆಯಾಗಿರುತ್ತದೆ. ಆದ್ದರಿಂದ ಕೆಲವು ನಿರ್ದಿಷ್ಟವಾದ ಕೇಸ್‌ಗಳಲ್ಲಿ ಮಂಜೂರಾಗಿರುವ ಹಣವನ್ನು ಆದಷ್ಟು ಜಾಗ್ರತೆ ರಿಲೀಸ್ ಮಾಡಿಸುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.— ಮಾನ್ಯ ಸಭಾಪತಿಯವರೆ, ಡಿಪಾರ್ಟ್‌ಮೆಂಟ್ ಆಫ್ ಕೊಲಿಜಿ ಯೇಟ್ ಎಜುಕೇಷನ್‌ನಲ್ಲಿ ಯಾವ ಯಾವ ಶಾಲಾ ಕಾಲೇಜುಗಳಿಗೆ ಗ್ರಾಂಟ್ ಮಂಜೂರಾಗಿದೆ ಅವುಗಳಿಗೆ ಈ ಹಣಕಾಸಿನ ವರ್ಷದಲ್ಲಿ ಗ್ರಾಂಟ್ ರಿಲೀಸ್ ಮಾಡುತ್ತೇವೆ.

ಶ್ರೀ ಟಿ. ಆರ್. ಶಾಮಣ್ಣ.— ಅನೇಕ ಕಾಲೇಜುಗಳಿಗೆ ಈ ರೀತಿ ಗ್ರಾಂಟ್ ರಿಲೀಸ್ ಮಾಡದೇ ಇರುವುದರಿಂದ ಈ ತಿಂಗಳ ೩೧ನೇ ತಾರೀಖಿನೊಳಗಾಗಿ ಅವರು ಗ್ರಾಂಟ್ ತೆಗೆದುಕೊಳ್ಳುವುಕ್ಕಾಗುವುದಿಲ್ಲ. ಉದಾಹರಣೆಗೆ ಹನುಮಂತಪುರ ಪೀಪಲ್ಸ್ ಎಜುಕೇಷನ್ ಸೊಸೈಟಿ ಇದೆ, ಇದನ್ನು ಇಲಾಖೆಯವರು ಬಂದು ಚಕ್ ಮಾಡಿ ಗ್ರಾಂಟ್ ರಿಲೀಸ್ ಮಾಡುವುದಕ್ಕಾಗುವುದಿಲ್ಲ. ಇನ್ನು ಉಳಿದಿರುವುದು ಕೇವಲ ೨—೩ ದಿವಸಗಳು ಮಾತ್ರ. ಇಂಥ ನಿರ್ದಿಷ್ಟವಾದ ೨—೩ ಪ್ರಕರಣಗಳು ನನ್ನ ಬಳಿ ಇವೆ. ಅವುಗಳಿಗೆ ಜಾಗ್ರತೆ ಗ್ರಾಂಟ್ ರಿಲೀಸ್ ಮಾಡಿಸುತ್ತೀರಾ ಸ್ವಾಮಿ ?

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.— ಅಂಥ ನಿರ್ದಿಷ್ಟ ಪ್ರಕರಣಗಳಿದ್ದರೆ ಅದನ್ನು ನನ್ನ ಗಮನಕ್ಕೆ ತಂದರೆ ಅದನ್ನು ಮಾಡಿಸಿಕೊಡುತ್ತೇನೆ.